ಸಿ.ಸಿ .ನಂ.154/2023 ಪಿಡಬ್ಲೂಃ 1

ದಿನಾಂಕಃ 02-09-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

3. ಈ ಪ್ರಕರಣದಲ್ಲಿ ಸಾಲಕ್ಕಾಗಿ ಅರ್ಜಿಯನ್ನು ದಿಃ 17-10-2019 ರಂದು ಸಲ್ಲಿಸಿರುತ್ತಾರೆ . ಸಾಲದ ಅರ್ಜಿ ಬಂದ ನಂತರ ಸಾಲ ಮಂಜೂರಾಗುವವರೆಗೆ 15 ದಿವಸಗಳ ಕಾಲಾವಕಾಶ ಬೇಕಾಗುತ್ತದೆ . ಸಾಲದ ಅರ್ಜಿ ಬಂದಾಗ ಅದನ್ನು ಪರಿಶೀಲಿಸಿ ನಾವು ನಮ್ಮ ಕೇಂದ್ರ ಕಚೇರಿಗೆ ಕಳುಹಿಸುತ್ತೇವೆ ಎಂದರೆ ಸರಿ .ಸಾಲದ ಅರ್ಜಿಯನ್ನು 8 ರಿಂದ 10 ದಿನಗಳ ಒಳಗೆ ಮುಖ್ಯ ಕಚೇರಿಗೆ ಕಳುಹಿಸುತ್ತೇವೆ . ಸಾಲದ ಅರ್ಜಿಯ ಜೊತೆಗೆ ಸಾಲದ ಅರ್ಜಿಯನ್ನು ಸಲ್ಲಿಸಿದವರ ಭಾವ ಚಿತ್ರ , ಆಧಾರ ಕಾರ್ಡ , ರೇಶನ್ ಕಾರ್ಡ ಹಾಗೂ ಇಬ್ಬರು ಜಾಮೀನುದಾರರ ಹೆಸರುಗಳನ್ನು ಕಳುಹಿಸಿರುತ್ತೇವೆ . ಕೇಂದ್ರ ಕಚೇರಿಯಲ್ಲಿ ಸಾಲ ಮಂಜೂರಾಗಿ 2 ರಿಂದ 3 ದಿನಗಳಲ್ಲಿ ವಾಪಸ್ಸು ಬರುತ್ತದೆ . ಸಾಲದ ಅರ್ಜಿಯ ಜೊತೆಗೆ ಸಾಲದ ಕರಾರು ಪತ್ರ ನಿಪಿ-8 ಮತ್ತು ನಿಪಿ-9 ಎಲ್ಲಾ ದಾಖಲೆಗಳನ್ನು ಕಳುಹಿಸುತ್ತೇವೆ. ಸದರಿ ದಾಖಲಾತಿಗಳ ಜೊತೆಗೆ ನಮ್ಮ ಶಾಖಾ ವ್ಯವಸ್ಥಾಪಕರ ಟಿಪ್ಪಣಿ ಕೂಡ ಇರುತ್ತದೆ ಎಂದರೆ ಸರಿ . ನಾವು ಕೇಂದ್ರ ಕಚೇರಿಗೆ ಸಾಲದ ಅರ್ಜಿಯನ್ನು ಕಳುಹಿಸುವಾಗ ನಮ್ಮ ಶಾಖಾ ವ್ಯವಸ್ಥಾಪಕರ ಟಿಪ್ಪಣಿ ಇರುತ್ತದೆ . ಆ ಟಿಪ್ಪಣಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲದ ಅರ್ಜಿ , ಟಿಪ್ಪಣಿ , ಸಾಲದ ಕರಾರು ಹಾಗೂ ಜಾಮೀನುದಾರರಿಂದ ಸಾಲ ಕೊಟ್ಟ ಬಗ್ಗೆ ಪಡೆದುಕೊಂಡಿರುವ ಸಹಿಗಳು ಎಲ್ಲಾ ಒಂದೇ ಶೀಟ್ ನಲ್ಲಿ ಇರುತ್ತದೆ ಎಂದರೆ ಸರಿ . ಎಲ್ಲಾ ಫಾರ್ಮೆಟ್ ಗೆ ಒಂದೇ ದಿನ ಸಹಿ ಪಡೆದುಕೊಳ್ಳುತ್ತೇವೆ ಎಂದರೆ ಸರಿ . ಆ ದಾಖಲಾತಿಗಳೆಲ್ಲಾ ಸಾಲಗಾರ ಹಾಗೂ ಜಾಮೀನುದಾರರು ಈ ಸಹಕಾರಿ ಸೌಹರ್ದ ನಿರ್ದೇಶನ ಮಂಡಳಿಯ ನಿರ್ಣಯದ ಪ್ರಕಾರ ಮಂಜೂರಾದ ಮೇರೆಗೆ ಸಾಲವಾಗಿ ಇಂತಿಷ್ಟು ರೂಪಾಯಿಯನ್ನು ಮುಖ್ಯ ಸಾಲಗಾರನು ಪಡೆದಿರುತ್ತಾರೆ ಅದಕ್ಕೆ ಶೇಕಡಾ ಇಷ್ಟು ಬಡ್ಡಿ ಎಂದು ನಮೂದು ಮಾಡಲಾಗುತ್ತದೆ

ಎಂದರೆ ಸರಿ . ಸಾಲದ ಅರ್ಜಿ ಬಂದ ನಂತರ ನಮ್ಮ ವ್ಯವಸ್ಥಾಪಕರು ಸಾಲ ಕೊಡಬಹುದು ಅಥವಾ ಕೊಡಬಾರದು ಎಂಬುದನ್ನು ಬರೆದು ಕಳುಹಿಸದೇ ಇದ್ದರೆ ಅಂತಹ ಸಾಲದ ಅರ್ಜಿ ತಿರಸ್ಕೃತಗೊಳ್ಳುತ್ತವೆ ಎಂದರೆ ಸರಿಯಲ್ಲ. ನಮ್ಮ ಕೇಂದ್ರ ಕಚೇರಿಯಲ್ಲಿ ಸಾಲ ಮಂಜೂರಾಗಿದೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಸಾಲದ ಪತ್ರದಲ್ಲಿ ನಮೂದಾಗಿರುತ್ತದೆ ಎಂದು ನುಡಿದಿರುತ್ತಾರೆ . ಈ ದಾಖಲಾತಿಗಳಲ್ಲಿ ಸಾಲ ಯಾವತ್ತು ಮಂಜುರಾಗಿದೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ನಕಲು ಪ್ರತಿಯಲ್ಲಿ ಇಲ್ಲ ಆದರೆ ಅಸಲು ಪ್ರತಿಯಲ್ಲಿ ಇದೆ ಎಂದು ನುಡಿದಿರುತ್ತಾರೆ . ಸಾಲದ ಕರಾರು ಪತ್ರಕ್ಕೆ ಸಾಲಗಾರರು ಹಾಗೂ ಜಾಮೀನುದಾರರು ಸಹಿ ಮಾಡುತ್ತಾರೆ ಎಂದರೆ ಸರಿ . ಸಾಲದ ಕರಾರು ಪತ್ರದಲ್ಲಿ ಎಷ್ಟು ಕಂತುಗಳಲ್ಲಿ ಸಾಲ ಮಂಜೂರಾಗಿದೆ ಎಂಬುದರ ವಿವರವನ್ನು ಬರೆಯುತ್ತಾರೆ ಎಂದರೆ ಸರಿ . ಪ್ರತಿ ತಿಂಗಳ ದಿನಾಂಕವನ್ನು ನಮೂದಿಸಿ ಪ್ರತಿ ತಿಂಗಳ ಕಂತಿನ ದಿನಾಂಕ ಹಾಗೂ ಪ್ರತಿ ತಿಂಗಳ ಕಂತಿನ ಹಣವನ್ನು ಬರೆಯುತ್ತಾರೆ ಎಂರೆ ಸರಿ . ಈ ಪ್ರಕರಣದಲ್ಲಿ 36 ಕಂತಿನ ಸಾಲವನ್ನು ಮಂಜೂರು ಮಾಡಿದ್ದಾರೆ . ನಾವು ಹಾಜರು ಪಡಿಸಿದ ಸಾಲದ ಕರಾರಿನಲ್ಲಿ ಕಂತುಗಳ ಬಗ್ಗೆ ಬರೆದಿಲ್ಲ ಎಂದರೆ ಸರಿ . ಸಾಕ್ಷಿ ಆ ಬಗ್ಗೆ ಬ್ಯಾಂಕಿನಲ್ಲಿ ಪ್ರತ್ಯೇಕವಾದ ರಜಿಸ್ಟರನ್ನು ಇಡಲಾಗಿದೆ ಎಂದು ನುಡಿದಿರುತ್ತಾರೆ . ದಿಃ 10-07-2019 ರಂದು ಸಾಲ ಮಂಜೂರಾಗಿರುತ್ತದೆ . ದಿಃ 10-07-2019 ರಂದು ಸಾಲ ಮಂಜೂರಾದ ಬಗ್ಗೆ ಎಸ್ ಬಿ ಖಾತೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ . ದಿಃ 10-07-2019 ರಂದು ಸಾಲದ ಹಣ ಸಂದಾಯವಾದ ಬಗ್ಗೆ ರಸೀದಿಯನ್ನು ಪಡೆದುಕೆಾಂಡಿರುತ್ತೇನೆ . ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಸಾಲದ ದಾಖಲಾತಿಗಳನ್ನು ದಿಃ 10-07-2019 ರ ಮುಂಚೆ ಪಡೆದುಕೊಂಡಿರುತ್ತೇವೆ . ದಿಃ 10-07-2019 ರ ನಂತರ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿಲ್ಲ.

ಪಿಡಬ್ಲ್ಯೂಃ 1

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.